ಅಧ್ಯಕ್ಷರು.—(ಶ್ರೀ ಕೆ. ಎಚ್. ಪಾಟೀಲ್.—ಗೈರು ಹಾಜರಿ) ಮಾನ್ಯ ಯಡಿಯೂರಪ್ಪನವರು, ತಮ್ಮ ಪ್ರಶ್ನೆ ಕೇಳುವುದು.

ಚುಕ್ಕೆ ಪ್ರಶ್ನೆ ಸಂಖ್ಯೆ. ೩೭೨ (೧೩೭೯)

ರಾಜ್ಯದ ಹಣಕಾಸಿನ ತೊಂದರೆ

೧೩೭೯. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ಸರ್ಕಾರಿ ನೌಕರರ ಸಂಬಳ ಕೊಡುವುದಕ್ಕೆ ಹಣಕಾಸಿನ ತೊಂದರೆ ಇರುವುದು ನಿಜವೇ ?

ಆ) ಹಾಗಿದ್ದಲ್ಲಿ ಬೆಂಗಳೂರು ಆಪೆಕ್ಸ್ ಬ್ಯಾಂಕಿನಿಂದ, ದಕ್ಷಿಣ ಕನ್ನಡ ಎಪಿಎಂಸಿ ಹಾಗೂ ಮುಜರಾಯಿ ದೇವಸ್ಥಾನಗಳಿಂದ ನಗರ ಕಾರ್ಪೋರೇಷನ್‌ಗಳಿಂದ ಸರ್ಕಾರದವರು ೫೦/೬೦ ಕೋಟಿ ರೂಪಾಯಿಗಳ ಹಣ ಪಡೆದಿರುವುದು ನಿಜವೆ ?

ಇ) ೧೯೮೭-೮೮ನೇ ಸಾಲಿನಲ್ಲಿ ಈವರೆಗೆ ಸರ್ಕಾರವು ಮೇಲ್ಕಂಡ ಸಂಸ್ಥೆಗಳಿಂದ ಎಷ್ಟು ಹಣ ಪಡೆದಿದೆ ? (ವಿವರ ಒದಗಿಸುವುದು).

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿ).—

ಅ) ರಾಜ್ಯವು ಸಂಪನ್ಮೂಲ ಕೊರತೆಯನ್ನು ಎದುರಿಸುತ್ತಿರುವುದು ನಿಜ. ಆದರೆ ರಾಜ್ಯದ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕಾಗಲಿ, ಅಥವಾ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಮಾಡುವುದಕ್ಕಾಗಲೀ ಯಾವುದೇ ತೊಂದರೆ ಉಂಟಾಗಿಲ್ಲ.

ಆ) ಖಜಾನೆಗಳಲ್ಲಿ ವೈಯಕ್ತಿಕ ಠೇವಣಿ ಖಾತೆಗಳನ್ನು ತೆರೆಯಲು ಅವಕಾಶವಿರುತ್ತದೆ. ಜಮೆ ಹಾಗೂ ಹಿಂದಂರುಗಿ ಪಡೆಯುವುದು ನಿರಂತರವಾಗಿ ನಡೆದಿರುತ್ತದೆ. ಠೇವಣಿದಾರರು ತಮ್ಮ ಕಾರ್ಯಕ್ರಮಗಳ ಅಗತ್ಯಗಳನುಸಾರ ಹಣವನ್ನು ಜಮೆ ಮಾಡಿ ಪಾಪಸ್ಸು ಪಡೆಯುತ್ತಾರೆ. ಸರ್ಕಾರಿ ನೌಕರರ ಸಂಬಳ ಕೊಡುವುದಕ್ಕಾಗಲಿ ಅಥವಾ ಅಭಿವೃದ್ಧಿ ಕಾರ್ಯಗಳಿಗಾಗಲಿ, ಯಾವ ಸಂಸ್ಥೆಯಿಂದಲೂ ಸರಕಾರ ಹಣ ಪಡೆದಿರುವುದಿಲ್ಲ. ಆದರೆ ಸರಕಾರದ ಅಲ್ಪಾವಧಿ ಹಾಗೂ ಅಗ್ರಿವಧಿನ ಪರಿಸ್ಥಿತಿಯನ್ನು ಸುಧಾರಿಸಲು ದಕ್ಷಿಣ ಕನ್ನಡ ಎ.ಪಿ.ಎಂ.ಸಿ. ಯಿಂದ ೧೯೮೭-೮೮ನೇ ಸಾಲಿನಲ್ಲಿ ರೂ. ೩.೫೬ ಕೋಟಿಯನ್ನು ಠೇವಣಿಯಾಗಿ ಪಡೆಯಲಾಗಿತ್ತು.

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನನ್ನಲ್ಲಿ ಅಧಿಕೃತವಾದ ಮಾಹಿತಿ ಉಂಟು ಸರಕಾರದವರು ಆಪೆಕ್ಸ್ ಬ್ಯಾಂಕ್‌ನಿಂದ, ಕೆಲವು ಎ. ಪಿ, ಎಂ. ಸಿ. ಗಳಿಂದ, ಬಿ. ಡಿ, ಎ. ನಿಂದ ಯಾವುದೇ ಅಭಿವೃದ್ಧಿ ಕಾರ್ಯಗಳಿಗಾಗಿ ಹಣಕಾಸಿನ ತೊಂದರೆಯಾಗಿದೆ ಅಂತಲೋ, ಅಥವಾ ಸರಕಾರಿ ನೌಕರರಿಗೆ ಸಂಬಳ ಸಾರಿಗೆಗಳನ್ನು ಕೊಡುವುದಕ್ಕೆ ಎಂತಲೋ, ಅವುಗಳಿಂದ ಹಣವನ್ನು ಪಡೆದಿದ್ದಾರೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಎ. ಪಿ. ಎಂ. ಸಿ. ಯಿಂದ ೩ ಕೋಟಿ, ೬೬ ಲಕ್ಷ ರೂಪಾಯಿಗಳನ್ನು ತೆಗೆದು ಕೊಂಡಿದ್ದಾರೆ. ಅವರು ಡಿಪಾಸಿಟ್ ಇಟ್ಟಿದ್ದ ಹಣವನ್ನು ನಿಮಗೆ ಕೊಟ್ಟಿದ್ದಾರೆ. ಅಂತಹ ಸಂದರ್ಭಗಳಲ್ಲಿ ಅವರಿಗೆ ಹೆಚ್ಚಿನ ಬಡ್ಡಿ ವ್ಯತ್ಯಾಸವನ್ನು ಸರಕಾರದವರು ತುಂಬಿ ಕೊಡುತ್ತಾರೆಯೇ ? ನಾನು ಸ್ಪಷ್ಟವಾಗಿ ಕೇಳಿದ್ದೇನೆ. ೧೯೮೭-೮೮ನೇ ಸಾಲಿನಲ್ಲಿ ಯಾವುದೇ ಪರಿಸ್ಥಿತಿ ಹಾಗಿ ಇರಬಹುದು, ಆಪೆಕ್ಸ್ ಬ್ಯಾಂಕ್‌ನಿಂದ ೧೦ ಕೋಟಿ ರೂಪಾಯಿಗಳನ್ನು ತರಿಸಿದ್ದೀರಿ. ಅದು ಅಭಿವೃದ್ಧಿ ಕಾರ್ಯಗಳಿಗಾಗಿ ತರಿಸಿರಬಹುದು. ಈ ರೀತಿಯಾಗಿ ಒಟ್ಟು ಎಲ್ಲಾ ಸಂಸ್ಥೆಗಳಿಂದ ತರಿಸಿದ ಹಣ ಎಷ್ಟು ? ಹೀಗೆ ಪಡೆದ ಹಣಕ್ಕೆ ವ್ಯತ್ಯಾಸದ ಬಡ್ಡಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದಂತೆ ನಾವು ಸಂಬಳ ಕೊಡುವುದಕ್ಕಾಗಿ ಅಥವಾ ದೈನಂದಿನ ಖರ್ಚಿಗಾಗಿ ಈ ಹಣವನ್ನು ನಾವು ಪಡೆದಿಲ್ಲ. ಕೇಂದ್ರ ಸರಕಾರದ ಹೊಸ

ನೀತಿಯ ಪ್ರಕಾರ ಯಾವುದೇ ರಾಜ್ಯಕ್ಕೆ ಓವರ್ ಡ್ರಾಫ್ಟ್‌ನ್ನು ಏಳು ದಿವಸಗಳಿಗಿಂತ ಹೆಚ್ಚಿಗೆ ಇಟ್ಟು ಕೊಳ್ಳುವ ಹಾಗಿಲ್ಲ. ಏಳು ದಿವಸಗಳಿಗಿಂತ ಯಾವುದೇ ರಾಜ್ಯ ಓ. ಡಿ. ಯನ್ನು ಇಟ್ಟು ಕೊಂಡಿದ್ದರೆ ಆ ರಾಜ್ಯದ ಚೆಕ್‌ನ್ನು ರಿಸರ್ವ್ ಬ್ಯಾಂಕ್‌ನವರು ಪುನ್ನಿಸುವುದಿಲ್ಲ. ಇದನ್ನು ಕಳೆದ ಮೂರು ವರ್ಷ ಗಳಿಂದ ಕಟ್ಟು ನಿಟ್ಟಾಗಿ ರಿಸರ್ವ್ ಬ್ಯಾಂಕ್‌ನವರು ನಡೆಸಿಕೊಂಡು ಬಂದಿದ್ದಾರೆ. ಇಂಥ ಪ್ರಸಂಗದಲ್ಲಿ ಓ. ಡಿ. ಯನ್ನು ನಾವು ಅನೇಕ ಸಲ ತೆಗೆದುಕೊಳ್ಳ ಬೇಕಾಗುತ್ತದೆ. ಕೇಂದ್ರ ಸರಕಾರದಿಂದ ಬರತಕ್ಕಂಥ ಹಣ ಕಾಲಕ್ಕೆ ಸರಿಯಾಗಿ ಬರುವುದಿಲ್ಲ, ಉದಾಹರಣೆಗೆ ನಮಗೆ ೫೫ ಕೋಟಿ ರೂಪಾಯಿಗಳು ಎಸ್. ಎಸ್. ಸಿ. ಯಿಂದ ನಮ್ಮ ಷೇರ್ ಬರಬೇಕಾಗಿತ್ತು. ಅದು ಬರಲಿಲ್ಲ. ಹೀಗೆ ತಡವಾದಾಗ ರಿಸರ್ವ್ ಬ್ಯಾಂಕ್‌ನಿಂದ ಓ. ಡಿ. ತೆಗೆದುಕೊಳ್ಳ ಬೇಕಾಗುತ್ತದೆ. ಏಳು ದಿವಸಗಳು ಆದ ಮೇಲೆ ಅವರು ನಮ್ಮ ಚೆಕ್‌ನ್ನು ಪುನ್ನಿಸುವುದು ನಿಲ್ಲಿಸುವುದರಿಂದ ಆ ಸಂದರ್ಭಗಳಲ್ಲಿ ನಾವು ತಾತ್ಕಾಲಿಕವಾಗಿ ಎ. ಪಿ. ಎಂ. ಸಿ. ಯಿಂದಲೋ, ಕಾರ್ಪೊರೇಷನ್‌ಗಳಿಂದಲೋ, ಹಣವನ್ನು ತೆಗೆದುಕೊಳ್ಳುವುದು ಉಂಟು. ಆ ರೀತಿಯಾಗಿ ೩೯ ಕೋಟಿ, ೪೮ ಲಕ್ಷ ರೂಪಾಯಿಗಳನ್ನು ನಾವು ಆಗಾಗ ತೆಗೆದುಕೊಂಡಿದ್ದೇವೆ. ಆದರಲ್ಲಿ ೨೭ ಕೋಟಿ ರೂಪಾಯಿಗಳನ್ನು ಈಗಾಗಲೇ ಸಂದಾಯ ಮಾಡಿದ್ದೇವೆ. ಈಗ ಇರತಕ್ಕಂಥಾದ್ದು ೧೦ ಕೋಟಿಗಳಿಂತಲೂ ಕಡಿಮೆ. ಅವರಿಂದ ತೆಗೆದುಕೊಂಡ ಹಣಕ್ಕೆ ನಾವು ಬಡ್ಡಿಯನ್ನು ಕೊಡುತ್ತೇವೆ. ಆ ಬಡ್ಡಿಯನ್ನು ನಾವು ರಿಸರ್ವ್ ಬ್ಯಾಂಕ್‌ನವರಿಗೆ ಕೊಡುವ ಬದಲು ನಮ್ಮ ಸಂಸ್ಥೆಗಳಿಗೇ ನಾವು ಕೊಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಭಿವೃದ್ಧಿ ಕಾರ್ಯಗಳಿಗೆ ಹಣಕಾಸಿನ ತೊಂದರೆ ಇಲ್ಲ ಎಂದು ಹೇಳಿದ್ದಾರೆ. ನಗರಸಭೆಗಳಿಗೆ, ಪುರಸಭೆಗಳಿಗೆ ಐದು ಲಕ್ಷ ಮತ್ತು ಮೂರು ಲಕ್ಷ ರೂಪಾಯಿ ಗಳನ್ನು ಉತ್ತಮ ಕಾರ್ಯನಿರ್ವಹಣೆ ಮಾಡಿದ್ದಕ್ಕಾಗಿ ಕೊಟ್ಟಿದ್ದೀರಿ. ಅದು ಬಹುಮಾನದ ರೂಪ ದಲ್ಲಿ ಉಡುಪಿಯಲ್ಲಿ ೨೨-೪-೬೮ರಂದು ಈ ಸಮಾರಂಭ ನಡೆಯಿತಾ. ಆವೊತ್ತು ಆ ಮೊತ್ತದ ಚೆಕ್‌ನ್ನು ಪುಂದಿನ ದಿನಾಂಕ ಅಂದರೆ ಜೂನ್ ತಿಂಗಳ ಡೇಟ್‌ಗೆ ಕೊಟ್ಟಿದ್ದೀರಿ ನಾನು ಇದನ್ನು ಏತಕ್ಕಾಗಿ ಕೇಳು ತ್ತಿದ್ದೇನೆ, ಅಂದರೆ ಈ ಸದನಕ್ಕೆ ಸರಕಾರದ ಹಣಕಾಸಿನ ಪರಿಸ್ಥಿತಿಯ ನಿಜವಾದ ಅರಿವು ತಿಳಿದುಕೊಳ್ಳ ಬೇಕಾಗುತ್ತದೆ. ಅಭಿವೃದ್ಧಿ ಕಾರ್ಯಗಳಿಗೆ ಹಣಕಾಸಿನ ತೊಂದರೆ ಇಲ್ಲದಿದ್ದರೆ ಬೇರೆ ಬೇರೆ ಸಂಸ್ಥೆಗಳಿಂದ ಹಣವನ್ನು ಪಡೆಯಂತಕ್ಕಂಥಾ ಕಾರಣ ಏನಿತ್ತು ? ಈ ರೀತಿಯಾಗಿ ಹಣಕಾಸಿನ ಉಬ್ಬರದಿಂದಾಗಿ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಯೋಜನೆಯ ನಿಗದಿಯನ್ನು ಏನು ಮಾಡಿದ್ದೇವೆ, ಅದರಲ್ಲಿ ಯಾವುದೇ ರೀತಿಯ ಕೊರತೆ ಮಾಡುವುದಕ್ಕೆ ನಾವು ಹೋಗುವುದಿಲ್ಲ ಎಂದು ಹೇಳಿದ್ದೇನೆ. ಈಗ ಮೊನ್ನೆ ತಾನೇ ಲೋಕ ಸಭೆಯಲ್ಲಿ ಒಬ್ಬ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಮಾನ್ಯ ಅರ್ಥ ಮಂತ್ರಿಯವರು ೧೨ ರಾಜ್ಯಗಳಲ್ಲಿ ಓ. ಡಿ. ತೆಗೆದುಕೊಳ್ಳುವಂಥ ಪರಿಸ್ಥಿತಿ ಉಂಟಾಯಿತು ಎಂದು ಹೇಳಿ ದ್ದಾರೆ. ಆದರಲ್ಲಿ ಕರ್ನಾಟಕವೂ ಒಂದು ಅದೇ ರೀತಿ ಮತ್ತೊಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಸುಮಾರು ೧೬ ರಾಜ್ಯಗಳು ೧೯೬೭-೬೮ನೇ ಸಾಲಿನ ಯೋಜನ ವೆಚ್ಚದ ಮೊತ್ತವನ್ನು ಖೋತಾ ಮಾಡ ತಕ್ಕಂಥ ಪರಿಸ್ಥಿತಿ ಬಂತು ಎಂದು ಹೇಳಿದ್ದಾರೆ. ಈ ೧೬ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಇಂದು ಹಣಕಾಸಿನ ಮುಗ್ಗಟ್ಟು ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಾದುದಲ್ಲ. ಆದನ್ನು ಸಮರ್ಥನೆ ಮಾಡು ವುದಕ್ಕೆ ನಾನು ಈ ಮಾತನ್ನು ಹೇಳುತ್ತಾ ಇಲ್ಲ. ಕೇಂದ್ರ ಸರಕಾರದವರು ಬೇರೆ ಬೇರೆ ಕಾರ್ಪೊರೇಷನ್ ಗಳಿಗೆ ಕೊಡತಕ್ಕಂಥ ಬಿಲ್ಲು ೪ ಸಾವಿರ ಕೋಟಿ ರೂಪಾಯಿಗಳು ಬಾಕಿ ಇವೆ.

ನಮ್ಮದು ೧೧೧ ಕೋಟಿ ಈಗ ಬಾಕಿ ಇದ್ದು ಅದರ ಪೈಕಿ ಈಗಾಗಲೇ ೫೦ ಕೋಟಿ ತೀರಿಸಿದ್ದೇವೆ. ಇನ್ನು ೬೦ ಕೋಟಿ ರೂಪಾಯಿಗಳು ಮಾತ್ರ ಬಾಕಿ ಇದೆ. ಈ ಸಂಸ್ಥೆಗಳಲ್ಲಿರುವ ಹಣ ಸರ್ಕಾರದ್ದಲ್ಲ ವೆಂದು ಹೇಳಿದರು. ನಿಜ, ಅದು ಸರ್ಕಾರದ್ದಲ್ಲ ಎಪಿಎಂಸಿಯಲ್ಲಿ ಹಣ ಇದೆ, ಅವರು ಎಲ್ಲಿಡಬೇಕು ? ಒಂದು ಟ್ರೆಜರಿಯಲ್ಲಿಡಬೇಕು, ಇಲ್ಲದಿದ್ದರೆ ಬ್ಯಾಂಕಿನಲ್ಲಿಡಬೇಕು. ಎಪಿಎಂಸಿ ಆಕ್ಟ್ ಪ್ರಕಾರ ಹಾಗೆ ಮಾಡಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ರಾಜ್ಯದ ಹಣಕಾಸಿನ ಪರಿಸ್ಥಿತಿಯಿಂದ ನೀವು ಅವುಗಳ ಹಣವನ್ನು ತೆಗೆದುಕೊಂಡಿರಬಹುದು. ಒಂದು ಪಕ್ಷ ನೀವು ಸಮಯಕ್ಕೆ ಸರಿಯಾಗಿ ಕೊಡದೇ ಹೋದರೆ ಆ ಸಂಸ್ಥೆಗಳ ಕೆಲಸ ಕಾರ್ಯಗಳು ಸ್ಥಗಿತವಾಗುವುದಿಲ್ಲವೇ ? ಬೇಲೂರು ಚನ್ನಕೇಶವ ದೇವಾಲ

ಯದ ಬಾಬ್ತು ಮುಜರಾಯಿ ಇಲಾಖೆಯಿಂದ ೮೮ ಲಕ್ಷ ತೆಗೆದುಕೊಂಡಿದ್ದೀರಿ. ಇದು ಸರಿಯೇ ? ಅವನ್ನು ಸಕಾಲದಲ್ಲಿ ತೀರಿಸಲು ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಹಾಲಿ ೩೮ ಕೋಟಿಯಲ್ಲಿ ಈಗಾಗಲೇ ೨೭ ಕೋಟಿಗಳನ್ನು ವಾಪಸ್ ಕೊಟ್ಟಿದ್ದೇವೆ. ಅದು ಬೇಲೂರು ಚನ್ನಕೇಶವ ದೇವಾಲಯದ್ದೋ ಎಲ್ಲವೋ ಹೇಳುವುದಕ್ಕಾಗುವುದಿಲ್ಲ ನಾವು ಮುಜರಾಯಿ ಇಲಾಖೆಗೆ ನಿಮ್ಮ ಹತ್ತಿರ ಸರ್‌ಪ್ಲಸ್ ಹಣ ಇದ್ದರೆ ಅದನ್ನು ಟ್ರೆಜರಿಯಲ್ಲಿ ಹಾಕಿ ಎನ್ನುತ್ತೇವೆ. ಅಂದರೆ ಓವರ್ ಡ್ರಾಫ್ಟ್ ಸಮಸ್ಯೆ ಏನಿದೆ ಅದು ಬಗೆಹರಿಯುವವರೆಗೆ ಮಾತ್ರ. ನಾವು ಯಾವುದೇ ಸಂಸ್ಥೆಯಿಂದ ತೆಗೆದುಕೊಂಡರೂ ಆ ಸಂಸ್ಥೆಗೆ ತೊಂದರೆಯಾಗುವ ರೀತಿಯಲ್ಲಿ ಆಗುವುದಕ್ಕೆ ಬಿಡುವುದಿಲ್ಲ.

ಶ್ರೀ ಎಸ್, ಬಂಗಾರಪ್ಪ.—ಕೆಲವು ಸಾರಿ ಓ. ಡಿ. ವಿಚಾರದಲ್ಲಿ ನಮಗೆ ಬೇರೆ ರಾಜ್ಯಗಳ ತರಹ ತೊಂದರೆ ಇದೆಯೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ರಾಜ್ಯಗಳಿಗೆ ಸಹಾಯ ಮಾಡುವ ದೃಷ್ಟಿಯಿಂದಲೇ ಕೇಂದ್ರ ಒಂದು ತೀರ್ಮಾನ ಮಾಡಿ ಎಲ್ಲ ರಾಜ್ಯಕ್ಕೂ ಕೂಡ ಓ. ಡಿ. ಹಣವನ್ನು ಒಂದೇ ಸಲ ಕೊಡುವುದಕ್ಕೆ ಕಷ್ಟವಾಗುತ್ತದೆ ಎಂಬ ದೃಷ್ಟಿಯಿಂದ ಮುಂದೆ ಓ.ಡಿ. ಪಿಡುಗನ್ನು ಅಂತಿಮವಾಗಿ ನಿರ್ಮೂಲನ ಮಾಡಬೇಕೆಂದು ಕಂತುಗಳ ಮೂಲಕ ತೀರುವಳಿ ಮಾಡಲು ಅವಕಾಶ ಕೊಟ್ಟರಂತೆ ವಾಗ ರಾಜ್ಯಕ್ಕೆ ಆ ತೀರ್ಮಾನ ಸಹ ಕಾರಿಯಾಗಿಲ್ಲ ಎಂದು ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ, ಜೊತೆಗೆ ರಾಜ್ಯದ ಕೆಲವು ಸಂಸ್ಥೆಗಳಿಂದ ತೊಂದರೆ ಬಂದಾಗ ಎರವಲಾಗಿ ಹಣವನ್ನು ಪಡೆದು ಬಡ್ಡಿ ಕೊಡುತ್ತೇವೆ ಎಂದೂ ಹೇಳಿದರು ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ರೀತಿಯಾಗಿ ಎಷ್ಟು ಸಲ ಯಾವ್ಯಾವ ಸಂಸ್ಥೆಯಿಂದ ಪಡೆದಿದ್ದೀರಿ ? ಹಿಂದೆ ಈ ರೀತಿ ಆಗಿದೆಯೇ ಎಂಬುದು ನನಗಂತೂ ನೆನಪಿಲ್ಲ. ಇದರಿಂದ ರಾಜ್ಯದ ಹಣಕಾಸಿನ ಪರಿಸ್ಥಿತಿ ಸಂಪೂರ್ಣವಾಗಿ ಅಧೋಗತಿಗೆ ಇಳಿದು ಹೋಗಿದೆ ಎಂಬುದನ್ನು ತಾವು ಮಾನ್ಯತೆ ಮಾಡುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಓ. ಡಿ. ವಿಚಾರದಲ್ಲಿ ನಾವು ಕಾಂಗ್ರೆಸ್ಸೇತರ ಮುಖ್ಯ ಮಂತ್ರಿಗಳು ಇದಕ್ಕೆ ಕಾಂಗ್ರೆಸ್ ಮುಖ್ಯ ಮಂತ್ರಿಗಳದ್ದು ಸಹಮತ ಇಲ್ಲ ಎಂದು ಪ್ರಕಟವಾಗಿ ಹೇಳಲಿಲ್ಲ ಅಷ್ಟೇ ಒಂದು ಸೂಚನೆಯನ್ನು ಕೇಂದ್ರಕ್ಕೆ ಮಾಡಿದ್ದುಂಟು. ಈಗಿರುವ ಒಂದು ವಾರದ ಅವಧಿಯನ್ನು ೫ ದಿಂಗಳಿಗೆ ಏರಿಸಬೇಕೂ ಎಂದು.

ಇವತ್ತು ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಏನಿದೆ ಅದನ್ನು ಬೇರೆ ಬೇರೆ ಸರ್ಕಾರಕ್ಕೆ ಒಂದೊಂದು ವಿಚಿತ್ರವನ್ನು ಏನು ನಿಗದಿ ಮಾಡಿರುತ್ತಾರೆ ಅದನ್ನು ಎರಡರಷ್ಟು ಮಾಡಬೇಕೆಂದು ಸೂಚನೆ ಮಾಡಿದ್ದೇವೆ. ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ವಿಚಾರದಲ್ಲಿ ಸ್ವಲ್ಪ ಮಟ್ಟಿಗೆ ಸಡಿಲತೆಯನ್ನು ಮಾಡಿದ್ದಾರೆ, ಅದರಿಂದಾಗಿ ೫೫ ಕೋಟಿ ರೂಪಾಯಿ ಹೆಚ್ಚಿಗೆ ಸಿಗುತ್ತದೆ, ಆದರೆ ಏನೂ ಪ್ರಯೋಜನವಾಗಲಿಲ್ಲ. ಎರಡನೇ ಪ್ರಶ್ನೆಗೆ ಉತ್ತರವೇನೆಂದರೆ, ಎಲ್ಲಾ ಸಂಸ್ಥೆಗಳಿಂದ ಹಣವನ್ನು ತೆಗೆದುಕೊಳ್ಳುತಕ್ಕಂಥಾ ಕಾರಣವೇನೆಂದರೆ ಕೇವಲ ಓವರ್ ಡ್ರಾಫ್ಟ್‌ನ ಒಂದು ಸಮಸ್ಯೆಯನ್ನು ತಾತ್ಕಾಲಿಕವಾಗಿ ನಿವಾರಿಸುವಂತಹ ಉದ್ದೇಶದಿಂದ ತೆಗೆದುಕೊಂಡಿದ್ದೇವೆ. ಆದರೆ ಅದನ್ನು ಯಾವುದೇ ರೀತಿಯಿಂದ ದುರುಪಯೋಗ ಮಾಡುವುದಿಲ್ಲ. ಮತ್ತು ಯಾವಾಗ ಆಗತ್ಯವಿದೆಯೋ ಆಗ ತೆಗೆದು ಕೊಂಡಿದ್ದೇವೆ ಇದರ ಬಗ್ಗೆ ನಾನು ಆಗಲೇ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೇನೆ. ಮಾನ್ಯ ಬಂಗಾರಪ್ಪನವರು ಗಮನಿಸಲಿಲ್ಲವೆಂದು ಕಾಣುತ್ತದೆ. ನಾವು ಒಟ್ಟು ತೆಗೆದುಕೊಂಡಿದ್ದು ೩೨ ಕೋಟಿ ರೂಪಾಯಿ ಅದರಲ್ಲಿ ೨೭ ಕೋಟಿ ರೂಪಾಯಿಯನ್ನು ಈಗಾಗಲೇ ಕೊಟ್ಟಿದ್ದೇವೆ, ಹಣಕಾಸಿನ ವಿಚಾರವನ್ನು ಪುಸ್ತಾಪ ಮಾಡಿರುವುದರಿಂದ, ಇನ್ನೂ ಕೆಲವು ಮಾಹಿತಿಯನ್ನು ನೀಡಬಯಸುತ್ತೇನೆ. ಪಾರ್ಲಿಮೆಂಟಿನಲ್ಲಿ ಏನು ಉತ್ತರ ಕೊಟ್ಟಿದ್ದಾರೆ ಅಂದರೆ ಮಹಾರಾಷ್ಟ್ರ ೧೫೫ ಕೋಟಿ ಓವರ್ ಡ್ರಾಫ್ಟ್ ಇದೆ, ಉತ್ತರ ಪ್ರದೇಶದಲ್ಲಿ ೧೦೬ ಕೋಟಿ ಕೇರಳದ್ದು ೬೧ ಕೋಟಿ ಇದೆ ಎಂದು.

ಶ್ರೀ ಎಸ್. ಬಂಗಾರಪ್ಪ.—ಮಹಾರಾಷ್ಟ್ರದ ಬಡ್ಜೆಟ್ ಏನು ಇದೆ ?

SRI RAMAKRISHNA HEGDE.—Maharstra is supposed to be one of the fortunate States where financial position is strong. ಆಂಧ್ರಪ್ರದೇಶದ್ದು ೪೧ ಕೋಟಿ ರೂಪಾಯಿ.